# ಬೆಳ್ಳಿತೆರೆಯಲ್ಲಿ ರಕ್ಷ್ ಹೊಸ ಹೆಜ್ಜೆ

ಕಿರುತೆರೆಯ ಯಶಸ್ಸನ್ನು ಮೆಟ್ಟಿಲಾಗಿಸಿಕೊಂಡು ಬೆಳ್ಳಿತೆರೆಗೆ ಬರುತ್ತಿರುವ ನಾಯಕರ ಸಾಲಿನಲ್ಲಿ ಸದ್ಯ ನಟ ರಕ್ಷ್ ರಾಮ್ ಇದ್ದಾರೆ. 'ಪುಟ್ಟ ಗೌರಿ ಮದುವೆ' ಹಾಗೂ 'ಗಟ್ಟಿಮೇಳ' ಧಾರಾವಾಹಿಗಳಲ್ಲಿ ನಟಿಸಿರುವ ರಕ್ಷ್, 'ಬರ್ಮ' ಮೂಲಕ ಸಿನಿಮಾರಂಗಕ್ಕೆ ಕಾಲಿಟ್ಟಿದ್ದಾರೆ.

**ಸುಮಲತಾ ಎನ್**



ಧಾರಾವಾಹಿ ಜನಪ್ರಿಯತೆಯನ್ನು ಬೆನ್ನಿಗಿಟ್ಟಿಕೊಂಡು ಬೆಳ್ಳಿತೆರೆ ಪ್ರವೇಶಿಸುತ್ತಿರುವ ನಾಯಕರ ಸಾಲಿಗೆ ಹೊಸ ಸೇರ್ಪಡೆ ನಟ ರಕ್ಷ್ ರಾಮ್. 12 ವರ್ಷಗಳ ಕಿರುತೆರೆ ಬದುಕಿನ ಅನುಭವಗಳೊಂದಿಗೆ 'ಬರ್ಮ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಬರುತ್ತಿದ್ದಾರೆ. ಈಚೆಗೆ ಘೋಷಣೆಯಾಗಿರುವ 'ಬರ್ಮ' ಸಿನಿಮಾದಲ್ಲಿ ರಕ್ಷ್ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

'ಪುಟ್ಟ ಗೌರಿ ಮದುವೆ' ಮೂಲಕ ಕಿರುತೆರೆ ಪ್ರವೇಶಿಸಿದ ರಕ್ಷ್ ಅವರದ್ದು ಮಾಗಡಿ ತಾಲ್ಲೂಕಿನ ಪುಟ್ಟ ಹಳ್ಳಿಯಲ್ಲಿನ ರೈತಾಪಿ ಕುಟುಂಬ. ಊರಿನಲ್ಲಿ ಪೌರಾಣಿಕ ನಾಟಕಗಳನ್ನು, ಸಿನಿಮಾಗಳನ್ನು ನೋಡುತ್ತಲೇ ಬೆಳೆದದ್ದು ಅವರಲ್ಲಿ ಸಿನಿಮಾ ಬಗ್ಗೆ ಪ್ರೀತಿ ಹುಟ್ಟಲು ಕಾರಣವಾಗಿತ್ತು. ಕಾಲೇಜು ಓದುತ್ತಿದ್ದಾಗ ತರಗತಿಗಿಂತ ವೇದಿಕೆ ಮೇಲೇ ಹೆಚ್ಚು ಕಾಣಿಸಿಕೊಳ್ಳುತ್ತಿದ್ದ ರಕ್ಷ್‌ಗೆ ನಾಟಕವೆಂದರೆ ಆಸಕ್ತಿ. ಸ್ನೇಹಿತರೇ ಸೇರಿ ಕಟ್ಟಿಕೊಂಡ ನಾಟಕ ತಂಡದಿಂದ ಹಲವು ಶೋಗಳನ್ನು ನೀಡಿದ್ದು ಸಿನಿಮಾ ಮೇಲಿನ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಿತ್ತು. ಇದೇ ಹಾದಿ ಹಿಡಿದು ಕೆಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿಯೂ ಕೆಲಸ ಮಾಡಿದರು.

ಆನಂತರ ಹುಡುಕಿಕೊಂಡು ಬಂದಿದ್ದು 'ಪುಟ್ಟ ಗೌರಿ ಮದುವೆ' ಧಾರಾವಾಹಿ. ಅಳುಕಿನಿಂದಲೇ ಧಾರಾವಾಹಿ ಒಪ್ಪಿಕೊಂಡ ಅವರಿಗೆ ಕಿರುತೆರೆ ಒಳ್ಳೆಯ ಐಡೆಂಟಿಟಿ ತಂದುಕೊಟ್ಟಿತ್ತು.

'ಸಿನಿಮಾದಲ್ಲಿ ನಟಿಸಬೇಕೆಂದು ಗುರಿ ಇಟ್ಟುಕೊಂಡಿದ್ದೆ. ಧಾರಾವಾಹಿಯಲ್ಲಿ ಅವಕಾಶ ಸಿಕ್ಕ ನಂತರ ಸ್ವಲ್ಪ ಅಳುಕಿತ್ತು. ಆದರೆ ಐಡೆಂಟಿಟಿ ಸೃಷ್ಟಿಸಿಕೊಳ್ಳಲು ಕಿರುತೆರೆ ಉತ್ತಮ ವೇದಿಕೆ ಎನಿಸಿತು. ಧಾರಾವಾಹಿಯಲ್ಲಿ ನಟಿಸಲು ಶುರು ಮಾಡಿದೆ. ಮೊದಲ ಧಾರಾವಾಹಿಯೇ ಅತಿ ಹೆಚ್ಚು ಎಪಿಸೋಡ್‌ಗಳಲ್ಲಿ ಪ್ರಸಾರಗೊಂಡು ಜನಪ್ರಿಯತೆ ಪಡೆಯಿತು. ಜನರು ತುಂಬಾ ಇಷ್ಟಪಟ್ಟು ಧಾರಾವಾಹಿ ನೋಡಿದರು. ಹನ್ನೆರಡು ವರ್ಷಗಳ ಈ ಪ್ರಯಾಣ ಸಾರ್ಥಕವಾಗಿದೆ. ಕಿರುತೆರೆ ನನಗೆ ಜೀವನ ಕಟ್ಟಿಕೊಟ್ಟಿದೆ. ಏನೂ ಇಲ್ಲದೇ ಬಂದವನಿಗೆ ಎಷ್ಟು ಕೊಡಲು ಸಾಧ್ಯವೋ ಅಷ್ಟನ್ನೂ ಕೊಟ್ಟಿದೆ' ಎಂದು ಖುಷಿಯಿಂದ ನೆನಪಿಸಿಕೊಳ್ಳುತ್ತಾರೆ.

'ಗಟ್ಟಿಮೇಳ' ಧಾರಾವಾಹಿಯಲ್ಲಿ ನಟಿಸಲು ಆರಂಭಿಸಿದ ನಂತರ ಸಾಕಷ್ಟು ಸಿನಿಮಾ ಅವಕಾಶಗಳು ಬಂದರೂ ಉತ್ತಮ ಕಥೆಯ ನಿರೀಕ್ಷೆಯಲ್ಲಿ ಅವುಗಳನ್ನು ಕೈಬಿಟ್ಟ ರಕ್ಷ್, ಸಿನಿಮಾ ಆಯ್ಕೆಯಲ್ಲಿ ತುಂಬಾ ನಿರ್ದಿಷ್ಟವಾಗಿರುವುದಾಗಿ ಹೇಳುತ್ತಾರೆ.

'ಸಿನಿಮಾ ಕಥೆ ಗಟ್ಟಿಯಾಗಿರಬೇಕು. ಅದು ನಮಗೇ ಟೊಳ್ಳೆನಿಸಿದರೆ, ಅದನ್ನು ನೋಡುವ ಪ್ರೇಕ್ಷಕರಿಗೆ ಖಂಡಿತ ಇಷ್ಟವಾಗುವುದಿಲ್ಲ. ಧಾರಾವಾಹಿಯಲ್ಲಿ ನಟಿಸುತ್ತಲೇ ಸಿನಿಮಾ ಅವಕಾಶಗಳು ಬಂದಿದ್ದವು. ಆದರೆ ಒಳ್ಳೆಯ ಪಾತ್ರಕ್ಕಾಗಿ ತುಂಬಾ ಕಾದಿದ್ದೇನೆ. ಆಸೆ ಪಡುವುದಷ್ಟೇ ಅಲ್ಲ, ಆ ಆಸೆಯನ್ನು ಈಡೇರಿಸಿಕೊಳ್ಳುವ ಪ್ರಯತ್ನ ಕೂಡ ಸೂಕ್ತವಾಗಿರಬೇಕು. ಎಲ್ಲರೂ ಏಕಾಏಕಿ ನಂಬರ್ 1 ಆಗಲು ಸಾಧ್ಯವಿಲ್ಲದಿದ್ದರೂ, ಆ ಸ್ಥಾನಕ್ಕೆ ಬರುವ ಸಾಲಿನಲ್ಲಿ ನಿಂತುಕೊಳ್ಳುವುದಕ್ಕಾದರೂ ಕಷ್ಟ ಪಡುವವರಿಗೆ ಒಂದು ಅವಕಾಶ ಸಿಕ್ಕೇ ಸಿಗುತ್ತದೆ ಎಂಬುದು ನನ್ನ ನಂಬಿಕೆ' ಎಂದು ಆಶಾಭಾವನೆ ವ್ಯಕ್ತಪಡಿಸುತ್ತಾರೆ.

ಸಿನಿಮಾರಂಗದ ಬಗ್ಗೆ ತುಂಬಾ ಪ್ರಾಕ್ಟಿಕಲ್ ಆಗಿರುವ ಅವರು, 'ಈಗಿನ ದಿನಗಳಲ್ಲಿ ಸಿನಿಮಾರಂಗದಲ್ಲಿ ಸರ್ವೈವ್ ಆಗುವುದು ಬಹಳ ಕಷ್ಟ. ಯಾರೂ ಬೆನ್ನಿಗಿಲ್ಲದೆ, ಸಿನಿಮಾರಂಗದ ಹಿನ್ನೆಲೆಯಿಲ್ಲದೇ ಹೊಸಬರು ಇಲ್ಲಿ ಉಳಿದುಕೊಳ್ಳುವುದು ಅಪರೂಪ. ಸಾಕಷ್ಟು ವಿಘ್ನಗಳನ್ನು ಹಿಂದಿಕ್ಕಿ ನಿಲ್ಲುವುದೇ ದೊಡ್ಡ ವಿಚಾರ. ಹಾಗಾಗಿ ಮೊದಲು ಇಲ್ಲಿ ಗಟ್ಟಿಯಾಗಿ ನಿಲ್ಲಬೇಕು. ಸದ್ಯ ನಾನು ಆ ಪ್ರಯತ್ನದಲ್ಲಿದ್ದೇನೆ. ಆಮೇಲೆ ವಿಶಿಷ್ಟ ಪಾತ್ರಗಳನ್ನು ಮಾಡುವಾಸೆ ಇದೆ. ಪಾತ್ರಗಳ ಆಯ್ಕೆ ಅನ್ನುವುದು ನನ್ನ ಮಟ್ಟಿಗೆ ಸದ್ಯಕ್ಕೆ ಲಕ್ಷುರಿ' ಎನ್ನುತ್ತಾರೆ.

ನಾಲ್ಕು ವರ್ಷಗಳಿಂದ ನಿರ್ಮಾಣ ಕ್ಷೇತ್ರದಲ್ಲಿಯೂ ತೊಡಗಿಕೊಂಡಿರುವ ರಕ್ಷ್ ಚೊಚ್ಚಲ ನಿರ್ಮಾಣದ ಸಿನಿಮಾ ಕೂಡ ಇದಾಗಿದೆ. 'ಬರ್ಮ' ಆ್ಯಕ್ಷನ್ ಎಂಟರ್‌ಟೇನ್ಮೆಂಟ್ ಸಿನಿಮಾ ಆಗಿದ್ದು, ಬಹದ್ದೂರ್, ಭರ್ಜರಿ, ಭರಾಟೆ ಹಾಗೂ ಜೇಮ್ಸ್ ಸಿನಿಮಾ ಖ್ಯಾತಿಯ ಚೇತನ್ ಕುಮಾರ್ ನಿರ್ದೇಶನ ಮಾಡುತ್ತಿದ್ದಾರೆ. ಕನ್ನಡ ಮಾತ್ರವಲ್ಲದೆ ತೆಲುಗು, ತಮಿಳು, ಮಲೆಯಾಳಂ, ಹಿಂದಿ ಭಾಷೆಯಲ್ಲಿಯೂ ಸಿನಿಮಾವನ್ನು ತೆರೆಗೆ ತರುವ ಯೋಜನೆಯಿದೆ.

'ಚೇತನ್ ಕುಮಾರ್ ಅವರ ಸಿನಿಮಾ ಟ್ರೀಟ್ಮೆಂಟ್ ತುಂಬಾ ಚೆನ್ನಾಗಿರುತ್ತದೆ. ಅದೇ ನನಗೆ ಸದ್ಯಕ್ಕೆ ಆಶಾಕಿರಣ' ಎನ್ನುತ್ತಾರೆ ರಕ್ಷ್. ಈಚೆಗೆ 'ರಕ್ಷ್ ರಾಮ್' ಎಂದು ತಮ್ಮ ಹೆಸರು ಬದಲಿಸಿಕೊಂಡಿದ್ದು, ಹೆಸರಿನೊಂದಿಗೆ ತಮ್ಮ ದಾರಿಯೂ ಹೊಸದಾಗುವ ಆಶಯ ಅವರದ್ದು.